# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **1385**
ಸದಸ್ಯರ ಹೆಸರು : ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭಾ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ : 16-03-2026
ಉತ್ತರಿಸುವ ಸಚಿವರು ಮಾನ್ಯ ಇಂಧನ ಸಚಿವರು

****

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಎಷ್ಟು ದೇವಸ್ಥಾನಗಳು ಗ್ರಾಮ ಠಾಣಾ ಜಾಗ ಅಲ್ಲದೇ ಇರುವ ಸ್ಥಳಗಳು ಅಥವಾ ಸ್ವಂತ ಜಾಗದಲ್ಲಿ ನಿರ್ಮಿಸಿರುವ ದೇವಸ್ಥಾನಗಳಿಗೆ ನಿರಾಕ್ಷೇಪಣಾ ಪ್ರಮಾಣ ಪತ್ರ (ಗ್ರಾಮ ಪಂಚಾಯತಿಯಿಂದ ಎನ್ ಓ ಸಿ) ನೀಡಿಲ್ಲ ಎಂದು ವಿದ್ಯುತ್ ವ್ಯವಸ್ಥೆ ಒದಗಿಸಿಲ್ಲ; ಇದಕ್ಕೆ ಪರಿಹಾರವಾಗಿ ಸರ್ಕಾರ ಯಾವ ರೀತಿ ವಿದ್ಯುತ್ ವ್ಯವಸ್ಥೆ ಕಲ್ಪಿಸಿಕೊಟ್ಟಿದೆ: | ರಾಜ್ಯದ ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ಗ್ರಾಮ ಠಾಣಾ ಜಾಗ ಅಲ್ಲದೇ ಇರುವ ಸ್ಥಳಗಳು ಅಥವಾ ಸ್ವಂತ ಜಾಗದಲ್ಲಿ ನಿರ್ಮಿಸಿರುವ ದೇವಸ್ಥಾನಗಳಿಗೆ ನಿರಾಕ್ಷೇಪಣಾ ಪ್ರಮಾಣ ಪತ್ರ (ಗ್ರಾಮ ಪಂಚಾಯತಿಯಿಂದ ಎನ್ ಓ ಸಿ) ನೀಡಿಲ್ಲ ಎಂದು ವಿದ್ಯುತ್ ವ್ಯವಸ್ಥೆ ಒದಗಿಸದೇ ಇರುವ ಅರ್ಜಿಗಳು ಯಾವುದೇ ಬಾಕಿ ಇರುವುದಿಲ್ಲ. |
| ಆ) | ಹಾಸನ ಜಿಲ್ಲೆ ಬೇಲೂರು ತಾಲ್ಲೂಕು ಕುಶವಾರ ಪಂಚಾಯತಿ ವ್ಯಾಪ್ತಿಯ ಮೊಗಸಾವರ ಗ್ರಾಮದ ಶ್ರೀ ಭೂತಪ್ಪ ದೇವರಿಗೆ ವಿದ್ಯುತ್ ವ್ಯವಸ್ಥೆ ಕಲ್ಪಿಸಲು ವಿಳಂಭವಾಗುತ್ತಿರುವುದಕ್ಕೆ ಕಾರಣವೇನು; (ಇಲ್ಲಿಯವರೆಗೆ ಗ್ರಾಮಸ್ಥರು ನೀಡಿರುವ ಅರ್ಜಿಯನ್ನು ಲಗತ್ತಿಸುವುದು) | ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತದ ಹಾಸನ ಜಿಲ್ಲೆ ಬೇಲೂರು ತಾಲ್ಲೂಕು ಬಿಕ್ಕೋಡು ಹೋಬಳಿ ಮೊಗಸಾವಾರ ಗ್ರಾಮದ ಜನರು ಶ್ರೀ ಭೂತಪ್ಪ ದೇವಸ್ಥಾನಕ್ಕೆ ವಿದ್ಯುತ್ ಸಂಪರ್ಕ ನೀಡಲು ಮನವಿ ಪತ್ರವನ್ನು ಸಲ್ಲಿಸಿದ್ದು, ಸದರಿಯವರಿಗೆ ಸೂಕ್ತ ದಾಖಲೆಗಳೊಂದಿಗೆ ಬೇಲೂರು ಉಪ-ವಿಭಾಗದಲ್ಲಿ ಅರ್ಜಿ ನೋಂದಾಯಿಸಿದ್ದಲ್ಲಿ ಶ್ರೀ ಭೂತಪ್ಪನ ದೇವಸ್ಥಾನಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸಲು ನಿಗಮದ ನಿಯಮಾನುಸಾರ ಕ್ರಮವಹಿಸಲಾಗುವುದು ಎಂದು ತಿಳಿಸಲಾಗಿರುತ್ತದೆ.<br><br>ಪ್ರಸ್ತುತ ಶ್ರೀ ಭೂತಪ್ಪ ದೇವಸ್ಥಾನದಿಂದ ವಿದ್ಯುತ್ ಸಂಪರ್ಕ ಕೋರಿ ಯಾವುದೇ ಅರ್ಜಿಯನ್ನು ಸಂಬಂಧಿಸಿದ ಚಾವಿಸನಿನಿ ಉಪವಿಭಾಗದಲ್ಲಿ ನೊಂದಾಯಿಸಿರುವುದಿಲ್ಲ. |
| ಇ) | ಶ್ರೀ ಭೂತಪ್ಪ ಗುಡಿಗೆ ವಿದ್ಯುತ್ ಕಲ್ಪಿಸಲು ಗ್ರಾಮ ಪಂಚಾಯಿತಿಯಿಂದ ಎನ್.ಓ.ಸಿ. ಪಡೆಯಲಾಗಿದೆಯೇ: ಈ ಗುಡಿಗೆ ಎಷ್ಟು ಕಂಬಗಳು ಬೇಕು ಎಂದು ಸ್ಕೇಚ್ ಮಾಡಲಾಗಿದೆಯೇ: (ಅದರ ಸಂಪೂರ್ಣ ದಾಖಲೆಯ ಪತ್ರವನ್ನು ನೀಡುವುದು); | ಸದರಿ ಗುಡಿಗೆ ವಿದ್ಯುತ್ ಕಲ್ಪಿಸಲು ಅರ್ಜಿ ನೋಂದಣಿಯಾಗಿರುವುದಿಲ್ಲ, ಭೂತಪ್ಪ ಗುಡಿ ದೇವಸ್ಥಾನಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸಲು 06 ಕಂಬಗಳ ಅವಶ್ಯಕತೆ ಇರುತ್ತದೆ. |

| | | |
|---|---|---|
| ಈ) | ಈ ಗುಡಿಗೆ ಯಾವ ಕಾಲಮಿತಿಯೊಳಗೆ ವಿದ್ಯುತ್ ವ್ಯವಸ್ಥೆ ಮಾಡಿಕೊಡಲಾಗುವುದು; ಯಾವ ದಾಖಲಾತಿ ಕೊರತೆಯಿಂದ ಭೂತಪ್ಪ ಗುಡಿಗೆ ವಿದ್ಯುತ್ ನೀಡಲು ವಿಳಂಭವಾಗುತ್ತಿದೆ; | ಅರ್ಜಿ ನೋಂದಣಿಯಾದಲ್ಲಿ ನಿಗಮದ ನಿಯಮಗಳಾನುಸಾರ ವಿದ್ಯುತ್ ಸಂಪರ್ಕ ಕಲ್ಪಿಸಲಾಗುವುದು. |
| ಉ) | ಹಾಸನ ಜಿಲ್ಲೆ ಬೇಲೂರು ತಾಲ್ಲೂಕು ಕುಶವಾರ ಗ್ರಾಮದಲ್ಲಿ ಲಿಂಕ್ ಲೈನ್ 11 ಕೆವಿಎ ಲೈನ್ ಕುಶವಾರದಿಂದ ಕೌರಿ ಗ್ರಾಮದವರೆಗೆ ಖಾಸಗಿ ತೋಟಗಳ ಒಳಗೆ ಹಾದು ಹೋಗಿದ್ದು ಮಳೆಗಾಲದಲ್ಲಿ ವಿದ್ಯುತ್ ವ್ಯತ್ಯಯವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಇದರಿಂದ ಶಾಲಾ ವಿದ್ಯಾರ್ಥಿಗಳಿಗೆ ಗ್ರಾಮದ ರೈತರಿಗೆ ಬಹಳ ತೊಂದರೆಯಾಗುತ್ತಿದ್ದು ಇದಕ್ಕೆ ಪರ್ಯಾಯವಾಗಿ ಸರ್ಕಾರ ಯಾವ ಕ್ರಮ ಕೈಗೊಂಡಿದೆ: ಯಾವ ಕಾಲಮಿತಿಯೊಳಗೆ ಇದಕ್ಕೆ ಸರ್ಕಾರದಿಂದ ಪರಿಹಾರ ನೀಡಲಾಗುತ್ತದೆ: (ಸಂಪೂರ್ಣ ಮಾಹಿತಿ ದಾಖಲೆಯೊಂದಿಗೆ ನೀಡುವುದು) | ಹಾಸನ ಜಿಲ್ಲೆ ಬೇಲೂರು ತಾಲ್ಲೂಕು ಕುಶವಾರ ಗ್ರಾಮಕ್ಕೆ ಅರೇಹಳ್ಳಿ ವಿದ್ಯುತ್ ಉಪಕೇಂದ್ರದ ಮಾಳೇಗೆರೆ 11ಕೆವಿ ಮಾರ್ಗದಿಂದ ವಿದ್ಯುತ್ ಸರಬರಾಜು ಆಗುತ್ತಿದ್ದು ಕುಶಾವರದಿಂದ ಕೌರಿ ಗ್ರಾಮದವರೆಗೆ ಹಾದುಹೋಗಿರುವ 11ಕೆವಿ ಮಾಳೇಗೆರೆ ಫೀಡರ್ ನಿರ್ವಹಣೆಯನ್ನು ನಿಯಮಿತವಾಗಿ ಕೈಗೊಂಡಿದ್ದು, ವಿದ್ಯುತ್ ವ್ಯತ್ಯಯ ಉಂಟಾಗದಂತೆ ಕ್ರಮಕೈಗೊಳ್ಳಲಾಗಿದೆ.<br><br>ಸದರಿ ಫೀಡರ್ ಖಾಸಗಿ ತೋಟಗಳಲ್ಲಿ ಹಾದು ಹೋಗಿದ್ದು ಜಮೀನಿನ ಮಾಲೀಕರು ಬಯಸಿದ್ದಲ್ಲಿ ಸ್ವಯಂ ಕಾರ್ಯ ನಿರ್ವಹಣೆಯಡಿ ಲೈನ್ ಸ್ಥಳಾಂತರ ಕೆಲಸ ಕೈಗೊಳ್ಳಬಹುದಾಗಿರುತ್ತದೆ. |

ಸಂಖ್ಯೆ: ಎನರ್ಜಿ 65 ಇಬಿಎಸ್ 2026

(ಕೆ.ಜೆ.ಜಾರ್ಜ್)
ಇಂಧನ ಸಚಿವರು